ದಿನಾಂಕಃ 05.02.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್.ಜಿ.ಎ. ವಕೀಲರಿಂದ:

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಮತ್ತು ಆಂಗ್ಲಭಾಷೆ ಓದಲು ಬರೆಯಲು ಬರುತ್ತದೆ. ನಾನು ವ್ಯವಸಾಯ ಮತ್ತು ಟ್ರಾಕ್ಟರ್ ಓಡಿಸುವ ಕೆಲಸ ಮಾಡುತ್ತೇನೆ. ನನ್ನ ಬಳಿ ಇರುವ ಟ್ರಾಕ್ಟರ್ ಸ್ವರಾಜ್ ಕಂಪೆನಿಯದ್ದು. ಆರೋಪಿ ನನಗೆ 2-3 ವರ್ಷಗಳಿಂದ ಪರಿಚಯ. ಅವರು ನನ್ನ ಟ್ರಾಕ್ಟರ್ ಚಾಲಕರಾಗಿದ್ದರು ಎಂದರೆ ಸರಿ. ಆರೋಪಿ ನನ್ನ ಬಳಿ 4-5 ತಿಂಗಳ ಕಾಲ ಕೆಲಸ ಮಾಡಿದ್ದಾರೆ. 2023 ರ 5 ಅಥವಾ 6 ನೇ ತಿಂಗಳಲ್ಲಿ ಆರೋಪಿ ನನ್ನ ಬಳಿ ಕೆಲಸ ಬಿಟ್ಟರು. ಆರೋಪಿಗೆ ದಿನಕ್ಕೆ ರೂ.800/- ಸಂಬಳ ಕೊಡುತ್ತಿದ್ದೆ. ಆರೋಪಿ ಕೆಲವೊಮ್ಮೆ ಪ್ರತೀದಿನ ಕೆಲವೊಮ್ಮೆ ವಾರಕ್ಕೊಂದು ಬಾರಿ ಸಂಬಳ ಪಡೆಯುತ್ತಿದ್ದರು. ನನ್ನ ಹಾಗೂ ಆರೋಪಿ ನಡುವೆ ಕರಾರು ಆಗಿಲ್ಲ. ಆರೋಪಿ ನನ್ನ ಬಳಿ ಕೆಲಸಕ್ಕೆ ಬಂದ ದಿನ ಅವರಿಂದ ಯಾವುದೇ ದಾಖಲೆ ಪಡೆದಿಲ್ಲ. ದಿ.05.01.2023 ರಂದು ಆರೋಪಿ ನನ್ನ ಬಳಿ ಹಣ ಕೇಳಲು ಬಂದಿದ್ದರು. ಆ ಸಮಯಕ್ಕೆ ಅವರು ನನ್ನ ಬಳಿ ಕೆಲಸ ಮಾಡುತ್ತಿದ್ದರು.

ಆರೋಪಿ ನನ್ನಿಂದ ಪಡೆದ ಹಣವನ್ನು ಅವರ ಸಂಬಳದ ಬಾಬ್ತು ಕಡಿತಗೊಳಿಸುತ್ತಿರಲಿಲ್ಲ. ಆರೋಪಿಯ ಸ್ವಂತ ಊರು ಬೂದಿನಕೆರೆ. ಆರೋಪಿ ತಾನಾಗೆ ನನ್ನ ಬಳಿ ಕೆಲಸಕ್ಕೆ ಬಂದಿದ್ದರು. ನನ್ನ ಅಳಿಯನ ಬಳಿ ಪಿಕ್ ಅಪ್ ವಾಹನ ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ನಾನು ಸರಿಯಾಗಿ ಸಂಬಳ ಕೊಡದೇ ನನ್ನ ಅಳಿಯನ ಪಿಕ್ ಅಪ್ ವಾಹನವನ್ನು ಚಾಲನೆ ಮಾಡಲು ಸಹಾ ಅವರನ್ನು ಕಳುಹಿಸುತ್ತಿದ್ದೆ ಎಂದರೆ ಸರಿಯಲ್ಲ. ದನಗಳನ್ನು ಸಾಗಾಟ ಮಾಡುತ್ತಿದ್ದ ಕಾರಣಕ್ಕೆ ನನ್ನ ಅಳಿಯನ ಪಿಕ್ ಅಪ್ ವಾಹನವನ್ನು ಆಲ್ದೂರು ಪೋಲಿಸರು ವಶಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯಕ್ಕೆ ಪಿಕ್ ಅಪ್ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದೆ ಎಂದು ಒಪ್ಪಿಕೊಳ್ಳುವಂತೆ ಅವರಿಗೆ ಹಿಂಸೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿಯನ್ನು ಹಲವಾರು ಬಾರಿ ಆಲ್ದೂರು ಪೋಲಿಸ್ ಠಾಣೆಯಲ್ಲಿ ಕೂರಿಸಿದ್ದೆ ಎಂದರೆ ಸರಿಯಲ್ಲ.

ನಾನು ಮೂಡಿಗೆರೆಯ ಬ್ಯಾಂಕ್ ಆಫ್ ಬರೊಡ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ಕಾಫೀ ಮಾರಾಟದಿಂದ ಬಂದ ಹಣದಿಂದ ಆರೋಪಿಗೆ ಹಣ ಕೊಟ್ಟಿದ್ದೇನೆ. ನನಗೆ ಕುಂದೂರು ಗ್ರಾಮದ ಸ.ನಂ.170 ರಲ್ಲಿ 12 ಎಕರೆ ಕಾಫೀ ತೋಟ ಇದೆ. ನನ್ನ ತೋಟದಲ್ಲಿ ರೋಬೋಸ್ಟಾ ಮತ್ತು ಅರೇಬಿಕಾ ಕಾಫೀ ಬೆಳೆಯುತ್ತೇನೆ. ಕಾಫೀ ಮಾರಾಟ ಮಾಡಿದ ದಿನಾಂಕ ನನಗೆ ಗೊತ್ತಿಲ್ಲ. ಆದರೆ 30 ಚೀಲ ಕಾಫೀ ಮಾರಾಟ ಮಾಡಿದ್ದೆ. ದಿ.05.01.2023 ರಂದು 1 ಕೆ.ಜಿ ಕಾಫೀ ಮೌಲ್ಯ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ನನ್ನಿಂದ ಕಾಫೀ ಖರೀದಿಸಿದ ವ್ಯಕ್ತಿಯಿಂದ ರೂ.1,25,000/- ಹಣ ಪಡೆದುಕೊಂಡಿದ್ದೆ. ಆರೋಗ್ಯ ಸರಿಯಿಲ್ಲ ಹಾಗೂ ಮಾಲೆ ಹಾಕಿರುವುದಾಗಿ ಹೇಳಿ ಆರೋಪಿ ನನ್ನಿಂದ ಹಣ ಪಡೆದರು. ಈ ವಿಚಾರವನ್ನು ನೋಟೀಸು ಮತ್ತು ಪಿರ್ಯಾದಿನಲ್ಲಿ ಬರೆಸಿಲ್ಲ. ನಾನು ಹಣ ಕೊಟ್ಟಿದ್ದರಿಂದ ಆರೋಪಿಯ ಸಮಸ್ಯೆ ಬಗೆಹರಿಯಿತ ಎಂದು ನಾನು ತಿಳಿದುಕೊಂಡಿಲ್ಲ. ನಾನು ಆರೋಪಿಗೆ ಹಣ ಕೊಡದೇ ಇದ್ದರು ನಾನು

ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಳಿಯನ ಪಿಕ್ ಅಪ್ ವಾಹನದ ಪ್ರಕರಣವನ್ನು ಒಪ್ಪಿಕೊಳ್ಳಲಿಲ್ಲ ಎನ್ನುವ ಕಾರಣಕ್ಕೆ ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ 2 ವರ್ಷ ಕೆಲಸ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಈ ಹಿಂದೆ ತರಕಾರಿ ವ್ಯಾಪಾರ ಮತ್ತು ಡ್ರೈವಿಂಗ್ ಕೆಲಸ ಮಾಡುತ್ತಿದ್ದರು. ಮೂಡಿಗೆರೆಯ ಮೇಗಲಪೇಟೆ ರಸ್ತೆಯ ಬಳಿ ತರಕಾರಿ ವ್ಯಾಪಾರ ಮಾಡುತ್ತಿದ್ದರು. ಯಾವ ಕಾರಣಕ್ಕೆ ಆರೋಪಿ ಹಣ ಪಡೆದರು ಎಂದು ಪಿರ್ಯಾದಿನಲ್ಲಿ ಬರೆಯಾಲಗಿದೆ ಎಂದು ನನಗೆ ತಿಳಿದಿಲ್ಲ. ನೋಟೀಸು, ಪಿರ್ಯಾದು ಮತ್ತು ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಯಾವ ದಿನಾಂಕದಂದು ಆರೋಪಿಗೆ ವಕೀಲರ ಮೂಲಕ ನೋಟಿಸು ಕಳುಹಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಆ ನೋಟಿಸು ಆರೋಪಿಗೆ ತಲುಪಿದೆ. ಆರೋಪಿ ಎಲ್ಲಿಯವರೆಗೂ ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಚೆಕ್ ನಲ್ಲಿನ ಬರವಣಿಗೆಗಳು ಆಂಗ್ಲ ಭಾಷಯಲ್ಲಿ ಇತ್ತು. ಆ ಬರವಣಿಗೆಯನ್ನು ಆರೋಪಿಯೊಂದಿಗೆ ಬಂದ ವ್ಯಕ್ತಿಯಿಂದ ಬರೆಸಿಕೊಟ್ಟರು. ದಿ.05.04.2023 ರಲ್ಲಿ ಚೆಕ್ ನಲ್ಲಿನ ಬರವಣಿಗೆಗಳನ್ನು ಬರೆಯಲಾಗಿದೆ. ನಿಪಿ-1 ರಲ್ಲಿನ ಸಹಿ ಮತ್ತು ಬರವಣಿಗೆಗಳ ನಡುವೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ತಿದ್ದುಪಡಿಯಾಗಿದೆ ಎಂದರೆ ಸರಿಯಲ್ಲ. ಚೆಕ್ ನ ಮೇಲೆ ಆರೋಪಿಯ ಒಂದು ಸಹಿ ಇತ್ತು. ದಿ.06.04.2023 ರಂದು ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿದ್ದೆ. ಚೆಕ್ ನ್ನು ಹಾಜರುಪಡಿಸಿದ ಬಾಬ್ತು ಪೇ ಇನ್ ಸ್ಲಿಪ್ ನ ಕೌಂಟರ್ ಫೈಲ್ ನನ್ನ ಬಳಿ ಇದೆ ಎಂದು ನನಗೆ ನೆನಪಿಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.